ಅಂದಿಗೆ ಸರಿಯಾಗಿ ಎಂಟು ದಿನಕ್ಕೆ ಅಜ್ರಾಳ ನಿಶ್ಚಿತಾರ್ಥವಾಯಿತು. ಕೊನೆಗೂ ನಯಾಜ್‌ನ ಆನ್‌ಲೈನ್ ಅನ್ವೇಷಣೆ ಫಲ ಕೊಟ್ಟಿತ್ತು. ದುಬೈನಲ್ಲಿ ದಂತವೈದ್ಯನಾಗಿದ್ದ ಫಹದ್‌ನೊಡನೆ ಅಜ್ರಾಳ ಮದುವೆ ನೆಮ್ಮದಿಯಾಗಿ ನೆರವೇರಿತು. ಮತ್ತು ಬೀಗರೂಟದ ದಿನ, ಅಂದರೆ ಇಂದು ರೆಹಮತ್ ಕೇಳಬಾರದ ಸುದ್ದಿಯನ್ನು ಕೇಳಿದ್ದಳು. ಅವಳನ್ನಂತೂ ದೇವರು ಪಾರು ಮಾಡಿದ್ದ. ಆದರೆ, ಆಸಿಫಾ? ಸಗೀರ್? ಅವಳ ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಯಿತು. ಅಂತೂ ಇಂತೂ ಬೀಗರೂಟವನ್ನು ಮುಗಿಸಿ ಗಂಡು ಹೆಣ್ಣನ್ನು ಕರೆದುಕೊಂಡು ಮನೆ ತಲುಪಿದ ನಂತರ ತೀರಾ ಸುಸ್ತಾಗಿದ್ದರೂ ರೆಹಮತ್ ಮಗನನ್ನು ತಮ್ಮ ಕೋಣೆಯೊಳಗೆ ಕರೆಸಿಕೊಂಡಳು .

'ಟೀವಿ ಆನ್ ಮಾಡು ಮಗನೇ' ಎಂದು ಅವಳ ಹೇಳುವುದಕ್ಕೂ ಅವನು ಆನ್ ಮಾಡುವುದಕ್ಕೂ ಸರಿ ಹೋಯಿತು. ನೋಡಿ ಸಹಿಸಲಸಾಧ್ಯವಾದ ನೋಟ. ಇಡೀ ಮನೆ ಗವ್ವೆನ್ನುತ್ತಿತ್ತು. ತಾನು ಹಿಂದೆ ನೋಡಿದಾಗ ಹೇಗೆ ಗಲಗಲ ಅನ್ನುತ್ತಿದ್ದ ಮನೆ ಇಂದು ದೆವ್ವದ ಮನೆಯಂತೆ ಬಿಕೋ ಅನ್ನುತ್ತಿತ್ತು. ಅವರಿಬ್ಬರೂ ಎಲ್ಲಿ ಅಡಗಿದ್ದಾರಪ್ಪಾ ಓ ನನ್ನ ಅಲ್ಲಾಹನೇ! ಅವಳ ಕಣ್ಣೀರು ಕೂಡ ಬತ್ತಿ ಹೋಗಿತ್ತು. ನಯಾಜ್ ಕೂಡಾ ನೆಟ್ಟನೋಟದಿಂದ ಒಂದೆರಡು ಗಳಿಗೆ ನೋಡುತ್ತಿದ್ದು ಪಟ್ಟೆಂದು ಟೀವಿ ಆಫ್ ಮಾಡಿದ. ಅವಳಿಗೆ ದುಃಖ ಎದೆಯಲ್ಲಿ ಕಟ್ಟಿಕೊಂಡಂತೆ ಅನಿಸತೊಡಗಿತು. ತಾನು ಮಾತನಾಡದಿದ್ದಲ್ಲಿ ಎದೆಯೊಡೆಯುವುದೇನೋ ಎಂಬಂತೆ ವಿಲಪಿಸುತ್ತಾ ಆಕೆ ಅವನೊಡನೆ ಅನೀಸ್‌ನ ಸುದ್ದಿಯನ್ನು ಹೇಳುತ್ತಾ ಬಿಕ್ಕಿಬಿಕ್ಕಿ ಅತ್ತಳು. ನಯಾಜ್ ಅವಳನ್ನು ಹತ್ತಿರಕ್ಕೆಳೆದುಕೊಂಡ. ಅವಳ ಬೆನ್ನ ಮೇಲೆ ಕೈಯಾಡಿಸುತ್ತಾ ಸಮಾಧಾನಪಡಿಸಿದ. ಆದರೂ ತನ್ನ ತಾಯಿಗೆ ಇಷ್ಟೊಂದು ದುಃಖ ಯಾಕೆ ಆಗಬೇಕೆಂಬುದು ಅವನ ಅರಿವಿಗೆ ನಿಲುಕದ ವಿಷಯವಾಗಿತ್ತು. 'ಆಯಿತಮ್ಮಾ ಸ್ವಲ್ಪ ಸಮಾಧಾನಪಡಿಸಿಕೋ, ಬಿಡು ಬಿಡು ನಾವಂತೂ ಆಪತ್ತಿನಿಂದ ಪಾರಾದೆವು' ಎಂದು ಅವಳನ್ನು ಸಂತೈಸಿದ.

'ಹೌದಪ್ಪಾ ಹೌದು... ನಾವಂತೂ ದೊಡ್ಡ ಆಪತ್ತಿನಿಂದ ಪಾರಾದೆವು. ದೇವರು ದಯಾಮಯಿ. ಆದರೆ, ಆಸಿಫಾ ಕೂಡಾ ತಾಯಿಯಲ್ಲವೇ? ಅವಳ ಏಕ ಮಾತ್ರ ಸಂತಾನ. ಅವಳಿಗ್ಯಾಕೆ ಇಂತಹ ಶಿಕ್ಷೆ?' ಎಂದು ಇನ್ನಷ್ಟು ಬಿಕ್ಕಿದಳು. ಆಸಿಫಾಳ ಆ ಭವ್ಯವಾದ ಮನೆ, ಆ ಮನೆಯ ಅಂದಚಂದ, ಅವಳ ಮನಸ್ಸಿನಾಳಕ್ಕೆ ಇಳಿದಿತ್ತು. ಟೀವಿಯಲ್ಲಿ ಕಂಡು ಬಂದ ಆ ಮನೆಯ ನೀರವತೆ ಬಾಗಿಲು ಬಡಿದಿದ್ದ ಮನೆಯ ಸುತ್ತಲೂ ಕೂಡಾ ಟೀವಿ ಕ್ಯಾಮೆರಾಗಳು, ಪೊಲೀಸ್ ವ್ಯಾನ್‌ಗಳು, ಜನರ ಕುತೂಹಲಭರಿತ ದೃಷ್ಟಿಗಳು, ಇಡೀ ಪ್ರಪಂಚದ ಕೇಂದ್ರ ಬಿಂದುವಾಗಿದ್ದ ಆ ಮನೆಯ ಯಾವುದೋ ಒಂದು ಕೋಣೆಯಲ್ಲಿ ಅಸಹಾಯಕರಾಗಿ

**'ನಯಾಜ್... ಗಡ್ಡ ಯಾಕೆ ಬಿಟ್ಟಿದೀಯಪ್ಪಾ?' ಎಂದು ಕೇಳಿದಳು. ಅದಕ್ಕವನು ವಿಚಿತ್ರವಾಗಿ ಪ್ರತಿಕ್ರಿಯೆಯನ್ನು ಸೂಚಿಸುತ್ತಾ 'ಹೌದು. ಗಡ್ಡ ಬಿಟ್ಟಿದ್ದೇನೆ. ಒಸಾಮಾ ಬಿನ್ ಲಾಡೆನ್ ಕರ್ದಿದ್ದಾನೆ. ಇನ್ನೂ ಒಂದಡಿ ಉದ್ದ ಬೆಳೆದರೆ ಅಲ್ ಖಾಯಿದಾ ಸೇರುತ್ತೇನೆ. ನಾನೀಗ ಟೆರರಿಸ್ಟ್ ಹ್ಹ... ಹ್ಹ... ಹ್ಹ' ಎಂದು ಥೇಟ್ ಬಾಲಿವುಡ್‌ನ ವಿಲನ್‌ನಂತೆ ನಕ್ಕು ಅಭಿನಯಿಸಿದ.**